# ಜನಪದ ತ್ರಿಪದಿಗಳಲ್ಲಿ ನೈತಿಕ ಮೌಲ್ಯಗಳ ಪ್ರಸ್ತುತೆ

**ರಮೇಶ್ ಸಿ,**

## ಪ್ರವೇಶ

ನಾವು ಇಂದು ಮತ–ಧರ್ಮಗಳ, ಜಾತಿ–ವರ್ಗಗಳ ಮೌಢ್ಯತೆಯ ಮತ್ತಿನಿಂದ ದೇಶದಲ್ಲಿ ಅಶಾಂತಿಯನ್ನುಂಟು ಮಾಡಿದ್ದೇವೆ. ಇದಕ್ಕೆ ಪ್ರಮುಖ ಕಾರಣ ನಮ್ಮನ್ನು ಆಳುವ ಚಾರಿತ್ರ್ಯವಿಲ್ಲದ ಕೆಲವು ರಾಜಕೀಯ ನಾಯಕರು, ಮಠಾಧಿಪತಿಗಳು ಧರ್ಮ, ಜಾತಿ, ವರ್ಗಗಳ ಕಿಚ್ಚಿಗೆ ತುಪ್ಪ ಸುರಿಯುತ್ತಾರೆ. ಇದರಿಂದ ಜನರು ದಯೆಯನ್ನು ಕಳೆದುಕೊಂಡು, ಹೃದಯ ವೈಶಲ್ಯತೆ ಮರೆತು ನೈತಿಕ ಮೌಲ್ಯಗಳನ್ನು ಕಳೆದುಕೊಂಡು, ಬದುಕುತ್ತಿದ್ದಾರೆ. ಇಂತಹ ಜನರಿಗೆ ನಮ್ಮ ಜನಪದರು ತಮ್ಮ ತ್ರಿಪದಿಗಳಲ್ಲಿ ಸಮಾಜದ ಕಣ್ಣು ತೆರೆಯುವಂತ ಅನೇಕ ಮಾನವೀಯ ನೈತಿಕ ಮೌಲ್ಯಗಳನ್ನು ಒಳಗೊಂಡ ಅಂಶಗಳನ್ನು ಉಣಬಡಿಸಿದ್ದಾರೆ. ಜನಪದ ಸಾಹಿತ್ಯ ದುಡಿಯುವ ವರ್ಗದ ಸಂಸ್ಕೃತಿಯ ಪ್ರತೀಕ. ಜನಪದ ಸಾಹಿತ್ಯದಲ್ಲಿ ಉದುಗಿದ ನೈತಿಕ ಮೌಲ್ಯಗಳು ಮನುಷ್ಯನ ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾದವುಗಳು. ಈ ಜನಪದ ಸಾಹಿತ್ಯ ಜನರ ಬಾಯಿಂದ ಬಾಯಿಗೆ ಉಳಿದುಕೊಂಡು ಬಂದಿದೆ. ಇದು ಓದು ಬರಹ ಬರದವರಿಂದ ಮೌಖಿಕವಾಗಿ ರಚನೆಗೊಂಡ ಸಾಹಿತ್ಯ. ಇದರಲ್ಲಿ ವಿವೇಚಿಸದ ವಿಷಯಗಳೇ ಇಲ್ಲ. ಈ ಸಾಹಿತ್ಯದಲ್ಲಿ ಮನುಷ್ಯನ ಬದುಕಿಗೆ ಸಂಬಂಧಿಸಿದ ಸುಖ–ದುಃಖ, ದುಗುಡ–ದುಮ್ಮಾನ, ನೋವು–ನಿರಾಸೆ ಕಾಯಕ–ನಿಷ್ಠೆ, ನೀತಿ–ನಿಯತ್ತು ಹೀಗೆ ಅನೇಕ ವಿಷಯಗಳನ್ನು ಎದೆಗೆ ನಾಟಿದಂತೆ ನಾಲಿಗೆಯ ಮೂಲಕ ಸಹಜವಾಗಿ ಹರಿಬಿಟ್ಟಿದ್ದಾರೆ. ಅಂತೆಯೆ ಜನಪದ ತ್ರಿಪದಿಗಳಲ್ಲಿ ಕಂಡು ಬರುವ ನೈತಿಕ ಮೌಲ್ಯಗಳ ಕುರಿತು ವಿವೇಚನೆ ಈ ಪ್ರಬಂಧದ ಉದ್ದೇಶವಾಗಿದೆ. ಮನುಷ್ಯ ಇಂದು ಅನೇಕ ಕಷ್ಟ–ಕೋಟಲೆಗಳಿಗೆ ಸಿಲುಕಿಕೊಂಡಿದ್ದಾನೆ. ಇದಕ್ಕೆ ಕಾರಣ ಅವನಲ್ಲಿನ ಮಿತಿ ಮೀರಿದ ದುರಾಸೆ. ಇಂತಹ ದುರಾಸೆಯನ್ನು ಕುರಿತು ಜನಪದ ತ್ರಿಪದಿಯೊಂದರಲ್ಲಿ ಹೇಳುವ ನೈತಿಕ ಮೌಲ್ಯ ಹೀಗಿದೆ.

“ಸುಡುಗಾಡ ಜೀವಕ್ಕೆ ಬಡಬಡಕಿ ಮಾಡ್ಯಾರ
ಕಡತಂದು ವಡವಿ ಇದನೋಡ। ಇಲ್ಲದ್ದ
ಹುಡುಕ್ಯಾಡಿ ಮಿಡುಕಾಡ ಬ್ಯಾಡ”

ಈ ತ್ರಿಪದಿಯಲ್ಲಿ ಮನುಷ್ಯನಿಗೆ ಹಾಸಿಗೆ ಇದ್ದಷ್ಟು ಕಾಚು ಚಾಚಿದರೆ ತೃಪ್ತಿಯಿಂದ ಬದುಕಬಹುದು ಎಂಬ ಸಂದೇಶ ನೀಡಿದ್ದಾರೆ.

ತಾಯಿಯಾದವಳು ಯಾವಗಲು ತನ್ನ ಮಕ್ಕಳ ಏಳಿಗೆಯನ್ನು / ಶ್ರೇಯಸ್ಸನ್ನು ಬಯಸುವವಳು. ಆದ್ದರಿಂದ ತನ್ನ ಮಕ್ಕಳಿಗೆ ಸದಾ ಒಳ್ಳೆಯದನ್ನ ಹೇಳುತ್ತಾಳೆ. ಒಳ್ಳೆಯದನ್ನ ಕಲಿಸುತ್ತಾಳೆ. ಅಂತೆಯೆ ಜನಪದ ತ್ರಿಪದಿಯೊಂದರಲ್ಲಿ

“ನೋಟ ನಡಿಗೆಗಳಲ್ಲಿ ನೀಟಾಗಿ ಇರಬೇಕು
ಹುಟ್ಟಿದಾ ಅರಿವು ಇರಬೇಕು। ಮರೆತರೆ
ತ್ವಾಟಕ್ಕೆ ಮಂಗ ಬಿದ್ದಾಂಗ” ಎಂದು ನಡೆ–ನುಡಿ ಶುದ್ಧವಾಗಿಟ್ಟುಕೊಳ್ಳಲು ಮನಸ್ಸನ್ನು ಸ್ವಚ್ಛವಾಗಿಟ್ಟುಕೊಳ್ಳಲು ಮಕ್ಕಳಿಗೆ ತಿಳಿ ಹೇಳಿದ್ದಾಳೆ. ಧರ್ಮ ದೇವರು, ಜಾತಿ–ವರ್ಗಗಳಿಂದ ಕಚ್ಚಾಡುವ ಜನರಿಗೆ ಜನಪದ ತ್ರಿಪದಿಯೊಂದರಲ್ಲಿ ಹೇಳುವ ನೀತಿಯು ಇಂದಿನ ಸಮಾಜಕ್ಕೆ ಅತ್ಯವಶ್ಯಕವಾಗಿದೆ.

“ಇವನು ಈ ದೇಶದಿಂದ ಅವನ ಆ ದೇಶದಂವ
ಎಲ್ಲ ದೇಶಕ ತಾಯಿ ಒಬ್ಬಾಕಿ । ಭೂದೇವಿ
ಬಲ್ಲಿನೆಂದರ ಒಂದ ಮಾಡ್ಯಾಳ” – ಇಲ್ಲಿ ಎಲ್ಲ ದೇಶಕು ತಾಯಿ ಒಬ್ಬಳೆ ಭೂದೇವಿ ಎನ್ನುವ ಮೂಲಕ ‘ಮಾನವ ಕುಲಂ ತಾನೊಂದೆ ವಲಂ’ ಎಂಬ ಪಂಪನ ವಿಶ್ವ ಮಾನವತೆಯ ಸಂದೇಶ ಜೊತೆಗೆ ಭಾವೈಕ್ಯತೆಯ ಸಂದೇಶ ಸಾರಿದ್ದಾರೆ. ದೊಡ್ಡವರು ಕೋಪದಲ್ಲಿ ಬೈಯ್ಯುವುದು ಸಹಜ ಅಂತಹ ಬೈಗಳನ್ನುನಾವು ಹೇಗೆ ಸ್ವೀಕರಿಸಬೇಕೆಂದು ಒಂದು ತ್ರಿಪದಿಯಲ್ಲಿ ಹೇಳುವುದು ಹೀಗೆ –

ಬೈದಂತ ಬೈಗಳು ಬೆನ್ನತ್ತಿ ಬಾರವು

ಬೈದವ್ವ ಕೇಳ ನನ ಮಾತ। ಬೈಗಳು

ಮಲ್ಲಿಗೆ ಹೂ ಮಾಡಿ ಮೂಡಿಹೋಗ॥ ಇಲ್ಲಿ ಜಗಳಕ್ಕೆ ಕೇಡಿಗೆ ಕಾರಣವಾಗುವ ಬೈಗಳನ್ನು ಮಲ್ಲಿಗೆ ಹೂಗಳಂತೆ ಸ್ವೀಕರಿಸುವಾಗ ತಾಳ್ಮೆಯಿಂದ ಸಹಿಸಿಕೊಂಡು ಬದುಕಿದರೆ ಬಾಳು ಅಸನಾದೀತು ಎಂದು ಹೇಳುವುದನ್ನು ಕಾಣುತ್ತೇವೆ. ಇಂದಿಗೂ ಸೊಸೆಗೆ ಅತ್ತೆಯಾದವಳು ನಾನಾ ರೀತಿಯ ತೊಂದರೆ ಕೊಡುವುದನ್ನು ಕಾಣುತ್ತೇವೆ. ಆದರೆ ಜನಪದ ತ್ರಿಪದಿಯೊಂದರಲ್ಲಿ ಕಲ್ಲು ಸಕ್ಕರೆಯಂತೆ ಸಿಹಿಯಾಗಿರುತ್ತೆ. ಅಂದರೆ ಸುಂದರವಾಗಿರುತ್ತದೆ. ಕೆಟ್ಟವರ ಸಂಗವ ಮಾಡಿದರೆ ನಮ್ಮ ಬದುಕು ಹಾಳಾಗುತ್ತದೆ ಹೀಗೆ ನಮ್ಮ ಬದುಕನ್ನು ಹಾಳು ಮಾಡಿಕೊಂಡರೆ ಬದುಕಿನುದ್ದಕ್ಕು ತೊಂದರೆ ಅನುಭವಿಸಬೇಕಾಗುತ್ತದೆ. ಆದ್ದರಿಂದ ನಾವು ಯಾವಗಾಲು ಒಳ್ಳೆಯವರ ಸಾವಸವನ್ನು ಬಯಸಬೇಕೆಂದು ಕರೆಕೊಟ್ಟಿರುವುದು ಇಂದಿಗೂ ಪ್ರಸ್ತುತವಾಗಿದೆ. ಇದೆ ರೀತಿ ಕೆಟ್ಟವರ ಸಂಗದಿಂದ ಉಂಟಾಗುವ ಪರಿಣಾಮವನ್ನು ಜನಪದ ತ್ರಿಪದಿಯೊಂದು ಹೇಳುವುದು ಹೀಗೆ,

"ಅಲ್ಲದವರ ತಡವಿ ಜಲ್ಲೆಂದು ನನ ಮನವ

ಕಲ್ಲಾಗ ಕಡ್ಡಿ ಬಡಿದ್ಹಾಂಗ। ನಿಗ್ಗೂಲಿ

ಮುಳ್ಳಾಗ ಹಾದಿ ತೆಗೆದ್ಹಾಂಗ" ಎಂದು ಕೆಟ್ಟವರನ್ನು ತಡವಿದರೆ ಜಗಳಕ್ಕೆ ದಾರಿಯಾಗುತ್ತದೆಂದು ಈ ತ್ರಿಪದಿಯಲ್ಲಿ ತಿಳಿಸಿದ್ದಾರೆ. ಸಮಾಜದಲ್ಲಿ ಬರಿ ಸುಳ್ಳು, ಕಳ್ಳತನ ಕೆಟ್ಟತನಗಳು ಇಂದಿಗೂ ತಾಂಡವಾಡುತ್ತಿವೆ. ಇದನ್ನು ಜನಪದ ಹೆಣ್ಣೊಬ್ಬಳು ವಿರೋಧಿಸಿ ಸನ್ಮಾರ್ಗದಿಂದ ನಡೆದುಕೊಳ್ಳಬೇಕೆಂದು ತಿಳಿಸುತ್ತಾಳೆ.

"ಸುಳ್ಳು ಹೇಳಲಿ ಬ್ಯಾಡ ಕಳವು ಮಾಡಲಿಬ್ಯಾಡ

ಒಳ್ಳೆಯ ಹಾದಿ ಬಿಡಬೇಡ। ನನ ತಮ್ಮ

ಹೊಳ್ಳಿ ನೋಡಬೇಡ ಪರಹೆಣ್ಣ" ಎಂದು ನಮ್ಮ ಬದುಕಲ್ಲಿ ಎಷ್ಟೆ ತೊಂದರೆಗಳು ಎಂದರು ನಾವು ಸುಳ್ಳು ಹೇಳದೆ, ಕಳ್ಳತನ ಮಾಡದೆ, ಪರ ಸ್ತ್ರೀಯನ್ನು ಕೆಟ್ಟ ದೃಷ್ಟಿಯಿಂದ ನೋಡದೆ ಬಾಳುವುದನ್ನ ಕಲಿಯಬೇಕೆಂದು ನೈತಿಕತೆಯ ಪಾಠ ಮಾಡಿರುವುದು ಪ್ರಸ್ತುತ ಸಮಾಜಕ್ಕೆ ಅವಶ್ಯವಾಗಿದೆ.

ಸಮಾಜದಲ್ಲಿ ಹೆಣ್ಣುಮಕ್ಕಳನ್ನು ಕೆಟ್ಟ ದೃಷ್ಟಿಯಿಂದ ನೋಡುವುದು, ಕಾಡುವುದು, ದೌರ್ಜನ್ಯ ಮಾಡವುದನ್ನು ಇಂದಿಗೂ ಕಾಣುತ್ತೇವೆ. ಇಂತಹ ಕೆಟ್ಟ ಮನಸ್ಸಿನ ಗಂಡು ಮಕ್ಕಳಿಗೆ ಹೇಳುವುದು ಹೀಗೆ

"ವಾರಿ ರುಮ್ಮಾಲ ಸುತ್ತಿ ದಾರ್‍ಯಾಗ ನಿಂತೀದ್ಯೋ

ಹ್ವಾರಾಇಲ್ಲೇನೊ ಹೊಲದಾಗ । ನನ ತಮ್ಮ

ನಾರಿಯಿಲ್ಲೇನೊ ಮನಿಯಾಗ ॥" ಎಂದು ಶೂಲದಿಂದ ತಿವಿದಂತೆ ಬುದ್ದಿ ಹೇಳುತ್ತಾಳೆ. ಇಲ್ಲಿ ಪರ ಸ್ತ್ರೀಯನ್ನು ಕೆಟ್ಟ ದೃಷ್ಟಿಯಿಂದ ನೋಡುತ್ತಾ, ಕಾಡುತ್ತಾ ತಿರುಗುವ ಪುಂಡರಿಗೆ ನಿಮಗೆ ಹೊಲದಲ್ಲಿ ದುಡಿಯಲು ಕೆಲಸವಿಲ್ಲವೆ ಎಂದು ಪ್ರಶ್ನಿಸುತ್ತಾ ಪರ ಸ್ತ್ರೀಯರು ನಮ್ಮ ಮನೆಯಲ್ಲಿರುವ ಹೆಣ್ಣು ಮಕ್ಕಳಂತೆ ಎಂದು ತಿಳಿದು ಬದುಕಬೇಕೆಂಬ ನೈತಿಕತೆಯ ಬೋಧನೆ ಮಾಡುತ್ತಾಳೆ. ಇಂತಹ ನೈತಿಕತೆಯು ಇಂದು ಎಲ್ಲೆಂದರಲ್ಲಿ ಹೆಣ್ಣುಮಕ್ಕಳನ್ನು ದೌರ್ಜನ್ಯ ಮಾಡುವ ಗಂಡಸರಿಗೆ ಪ್ರಸ್ತುತವೆನಿಸುತ್ತದೆ.

"ಕೆನ್ನೆಯ ಬಡಿಬ್ಯಾಡ ಕೈ ಬಳಿ ಒಡಿದಾವು

ಸಣ್ಣಂಚಿನ್ವಾಲೆ ಮುರಿದಾವು । ನನ ಮಗನ

ಮಡದಿ ಬಡಿಬ್ಯಾಡ" ಎನ್ನುವ ಮೂಲಕ ಸೊಸೆಯನ್ನು ಮಗಳಂತೆ ಕಾಣಬೇಕೆಂಬ ವಿಶಾಲ ಮನಸನ್ನು ಬೆಳಸಿಕೊಳ್ಳಲು ಸಮಾಜಕ್ಕೆ ಕರೆಕೊಡುತ್ತಾಳೆ. ಗಂಡ ಸತ್ತ ಹೆಣ್ಣನ್ನು ನಮ್ಮ ಸಮಾಜದಲ್ಲಿ ಇಂದಿಗೂ ಕೀಳಾಗಿ ನೋಡುವುದು ಕಂಡುಬರುತ್ತದೆ. ಅವಳು ಅಶುಭ, ಅಮಂಗಳ ಎಂದು ನೋಡುತ್ತಾರೆ. ಆದರೆ ಜನಪದ ಮಹಿಳೆ ಅವಳನ್ನೆ ಪವಿತ್ರವೆಂದು ಬಾವಿಸುವುದು ಹೀಗೆ.

" ಗಂಡ ಸತ್ತವ್ವಗ ರಂಡಿ ಮುಂಡೆನಬೇಡ

ಕಂದನ ಹಿಡಿದು ತಪಹಾಳ । ಅವಳೀಗಿ

ಗಂಗಾದೇವೆಂದು ಕರಿಬೇಕ" ಎನ್ನುತ್ತಾಳೆ. ಸಮಾಜದ ಕಣ್ಣಲ್ಲಿ ವಿಧವೆಗೆ ಮಂಗಳ ಕಾರ್ಯಗಳಿಗೆ ಪ್ರವೇಶವಿಲ್ಲ ಜನಪದ ತಾಯಿಯೊಬ್ಬಳು ಅವಳನ್ನೆ ಪವಿತ್ರ ಗಂಗೆ ಎಂದು ಭಾವಿಸಬೇಕೆಂದು ಸಮಾಜಕ್ಕೆ ನೀತಿಯನ್ನು ಹೇಳುತ್ತಾಳೆ.

ನಮ್ಮ ಸಮಾಜದಲ್ಲಿ ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ ಆದರೆ ನಮ್ಮ ಬದುಕಿಗೆ ಯಾರ ಸ್ನೇಹ ಪೂರಕವೆಂದು ಜನಪದ ತ್ರಿಪದಿಯೊಂದು ಹೇಳುವುದು ಹೀಗೆ –

"ಒಳ್ಳೆಯವರ ಗೆಳೆತನ ಕಲ್ಲು ಸಕ್ಕರಿಹಾಂಗ
ಕುಲ್ಲರ ಗೆಳೆತನ ಮಾಡಿದರ । ನನ ತಮ್ಮ
ಸಲ್ಲದ ಮಾತು ಬರುತಾವ" ಇಲ್ಲಿ ನಮ್ಮ ಬದುಕಿನಲ್ಲಿ ಒಳ್ಳೆಯವರ ಗೆಳೆತನ ಮಾಡಿದರೆ, ನಮ್ಮ ಬದುಕು ಬಂಗಾರವಾಗುತ್ತದೆ. ಎಂದು ಹೇಳಿದ್ದಾಳೆ. ಸಮಾಜದಲ್ಲಿ ಕೆಲವರು ಜೂಜಾಟದಂತ ಕೆಟ್ಟ ಚಟಗಳಿಗೆ ಬಲಿಯಾಗಿ ಬದುಕನ್ನು ನಾಶಮಾಡಿಕೊಳ್ಳುವುದನ್ನು ಇಂದಿಗೂ ಕಾಣುತ್ತೇವೆ ಹೀಗೆ ಜೂಜಾಟದಿಂದ ಉಂಟಾಗುವ ಪರಿಣಾಮವನ್ನು ಮತ್ತು ಅಂತಹ ಚಟಗಳಿಂದ ದೂರವಿರಲು ಸಲಹೆ ನೀಡುವುದು ಹೀಗೆ–

"ಜೂಜಾಡಿ ಪಾಂಡವರು ರಾಜ್ಯವನ್ನು ಸೋತರು
ಜೂಜಾಡಿ ನಳನು ಬಳಲಿದ । ಕಂದಯ್ಯ
ಜೂಜಿಗೆ ಮನವ ಬಿಡಬೇಡ ॥ ಎಂದು ಈ ತ್ರಿಪದಿಯಲ್ಲಿ ಹೇಳುವುದು ಪ್ರಸ್ತುತವೆನಿಸುತ್ತದೆ. ನಾವು ಮತ್ತೊಬ್ಬರ ಬಗ್ಗೆ ಕೆಟ್ಟ ಮಾತನಾಡುತ್ತೇವೆ. ಆಗೆ ಕೆಟ್ಟ ಮಾತನಾಡುವರ ಕುರಿತು

ಹಚ್ಚುಗನು ಬರುತಾನ ಚುಚ್ಚುಗನು ಬರುತಾನ
ಮತ್ತೇಳು ಮನಿಯ ಮುರದಾನ । ಧಡಧಡನ
ಮತ್ತೋಂದು ಮಾತ ತಗಿಯವ್ವ" ಎಂದು ಮತ್ತೊಬ್ಬರ ಕುರಿತು ಕೆಟ್ಟ ಮಾತುಗಳಿಂದಾಡಿಕೊಳ್ಳುವವರಿಗೆ ಚುಚ್ಚುವ ಮಾತಿನಿಂದ ಸಂಸಾರವೇ ಹಾಳಾಗುತ್ತದೆ. ಆದ್ದರಿಂದ ಆಕೆ ಮತ್ತೊಂದು ಮಾತ ತಗಿಯವ್ವ ಎನ್ನುವುದು ಪ್ರಸ್ತುತ ಸಮಾಜಕ್ಕೆ ಹೇಳುವ ನೈತಿಕತೆಯ ಮಾತಾಗಿದೆ.

ಹೀಗೆ ಜನಪದ ತ್ರಿಪದಿಗಳಲ್ಲಿ ಧರ್ಮ–ದೇವರು, ತಾಳ್ಮೆ ಮನುಷ್ಯನು ಇತಿ–ಮೀತಿಯಲ್ಲಿ ಬದುಕುವುದು ಹೆಣ್ಣನ್ನು ಒಳ್ಳೆಯ ದೃಷ್ಟಿಯಿಂದ ನೋಡುವುದು, ಕೆಟ್ಟವರ ಸಹವಾಸದಿಂದ ದೂರವಿರುವುದು, ಸುಳ್ಳು, ಮೋಸ ಕಪಟತನಗಳಿಂದ, ಜೂಜಾಟದಿಂದ ದೂರವಿದ್ದು ಸುಖ ಸಂತೋಷದಿಂದ ಬದುಕುವ ನೈತಿಕ ಮೌಲ್ಯಗಳನ್ನು ತಿಳಿಸಿರುವುದು ಕಂಡು ಬರುತ್ತದೆ.

**ಆಧಾರ ಗ್ರಂಥಗಳು / ಗ್ರಂಥ ಋಣ**


1. 'ಹಾಲಿನ ತೆನೆ' : ಸಂ. ಡಾ. ಎಲ್. ಆರ್. ಹೆಗಡೆ,
   ಕರ್ನಾಟಕ ವಿಶ್ವವಿದ್ಯಾಲಯ
   ಧಾರವಾಡ – 1977

2. 'ಕನ್ನಡ ಜಾನಪದ' : ಪ್ರ.ಸಂ.ಪ್ರೊ ಕೆ.ಎನ್ ಗಂಗಾನಾಯಕ್
   ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
   ಮೈಸೂರು ವಿಶ್ವವಿದ್ಯಾನಿಲಯ
   ಮಾನಸಗಂಗೋತ್ರಿ, ಮೈಸೂರು.

3. ಸರ್ವಜ್ಞನ ವಚನಗಳು : ಸಂ.ಡಾ. ಎಲ್. ಬಸವರಾಜು
   ಗೀತಾ ಬುಕ್ ಹೌಸ್
   ಮೈಸೂರು.

4. ಜನಪದ ಮುಕ್ತಕಗಳು : ಲೇಖಕರು : ಶ್ರೀ ಮುದೇನೂರು ಸಂಗಣ್ಣ
ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗರಸ್ತೆ
ಬೆಂಗಳೂರು.

5. ಜನಪದ ಗೀತೆಗಳಲ್ಲಿ ತಾಯಿ : ಪ್ರೋ. ಶ್ರೀಮತಿ ಡಿ.ಡಿ ನಗರಕರ್,
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ